

بسم اللهِ الرّحمٰن الرّحيم

# ಹಝ್ರತ್ ಪೈಗಂಬರ್(ಸ)ರ ವಿನಯ ಮತ್ತು ನಮ್ರತೆಯ ಸುಂದರ ಮಾದರಿಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–05–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯ ಅಂಶವಾದ ವಿನಯ ಮತ್ತು ನಮ್ರತೆಯ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಇಂದು ಸಹ ಅದೇ ಪ್ರಸ್ತಾಪವಾಗಿದೆ. ಹಝ್ರತ್ ಪೈಗಂಬರ್(ಸ) ಸಣ್ಣ ಸಣ್ಣ ವಿಷಯಗಳ ಉದಾಹರಣೆಗಳನ್ನು ನೀಡಿ ಇದನ್ನು ವ್ಯಕ್ತಪಡಿಸುತ್ತಿದ್ದರು. ರಸೂಲುಲ್ಲಾಹ್(ಸ) ಹೀಗೆ ಹೇಳಿದರು: ನಾನು ಸೇವಕನು ತಿನ್ನುವಂತೆ ತಿನ್ನುತ್ತೇನೆ ಮತ್ತು ಸೇವಕನು ಕುಳಿತುಕೊಳ್ಳುವಂತೆಯೇ ನಾನು ಕುಳಿತುಕೊಳ್ಳುತ್ತೇನೆ, ಏಕೆಂದರೆ ನಾನು ಕೂಡ ಒಬ್ಬ ದಾಸ ಮಾತ್ರ ಆಗಿರುವೆನು. ಅಂದರೆ ನಾಯಕರು ಮತ್ತು ಶ್ರೀಮಂತರಿಗಿರುವಂತಹ ಅಹಂಕಾರ ಮತ್ತು ಆಡಂಬರ ನನ್ನಲ್ಲಿಲ್ಲ.

ಹಝ್ರತ್ ಅನಸ್(ರ)ರಿಂದ ಹೀಗೆ ವರದಿಯಾಗಿದೆ: ರಸೂಲುಲ್ಲಾಹ್(ಸ)ರ 'ಅಧ್‌ಬಾ' ಹೆಸರಿನ ಒಂಟೆಯು ಎಷ್ಟು ವೇಗವಾಗಿತ್ತೆಂದರೆ, ಯಾವುದೇ ಒಂಟೆಯು ಅದಕ್ಕಿಂತ ಮುಂದೆ ಹೋಗಲು ಸಾಧ್ಯವಿರಲಿಲ್ಲ. ಒಬ್ಬ ಹಳ್ಳಿಗನು ತನ್ನ ಎಳೆಯ ಒಂಟೆಯ ಮೇಲೆ ಸವಾರಿ ಮಾಡಿಕೊಂಡು ಬಂದನು ಮತ್ತು ಸ್ಪರ್ಧೆಯಲ್ಲಿ ಆ ಒಂಟೆಯು ಅಧ್‌ಬಾಗಿಂತ ಮುಂದೆ ಹೋಯಿತು. ಅಧ್‌ಬಾ ಹಿಂದೆ ಉಳಿಯಿತು ಮತ್ತು ಅವನ ಒಂಟೆ ಮುಂದೆ ಹೋಯಿತು ಎಂಬ ಸಂಗತಿ ಮುಸ್ಲಿಮರಿಗೆ ತುಂಬಾ ಅಸಮಾಧಾನವನ್ನುಂಟು ಮಾಡಿತು. ಅವರ ಈ ವರ್ತನೆಯನ್ನು ಕಂಡಾಗ ರಸೂಲುಲ್ಲಾಹ್(ಸ) ಹೀಗೆ ಹೇಳಿದರು: ಲೋಕದಲ್ಲಿ ತಾನು ಉನ್ನತಕ್ಕೆ ಏರಿಸಿದ ವಸ್ತುವನ್ನು ಕೆಳಗಿಳಿಸುವುದು ಕೂಡ ಅಲ್ಲಾಹನ ಹಕ್ಕಾಗಿದೆ.

ವಿನಯದ ಮತ್ತೊಂದು ಉದಾಹರಣೆಯನ್ನು ಹಝ್ರತ್ ಉಮರ್(ರ) ವಿವರಿಸುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರೊಡನೆ ಉಮ್ರಾ ಮಾಡಲು ಅನುಮತಿ ಕೇಳಿದೆ. ಹಝ್ರತ್ ಪೈಗಂಬರ್(ಸ) ಅನುಮತಿ ನೀಡಿದರು ಮತ್ತು ಹೀಗೆ ಹೇಳಿದರು: 'ಹೇ ನನ್ನ ಸಹೋದರ, ನಿನ್ನ ಪ್ರಾರ್ಥನೆಯಲ್ಲಿ ನನ್ನನ್ನು ಮರೆಯಬೇಡ.' ಹಝ್ರತ್ ಉಮರ್(ರ) ವಿವರಿಸುತ್ತಾರೆ, ಹಝ್ರತ್ ಪೈಗಂಬರ್(ಸ) ಹೇಳಿದ ಈ ಮಾತಿಗೆ ಬದಲಾಗಿ ನನಗೆ ಇಡೀ ಪ್ರಪಂಚವೇ ಸಿಕ್ಕಿದ್ದರೂ ನನಗೆ ಇಷ್ಟು ಸಂತೋಷವಾಗುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಮೇಲೆ ದರೂದ್ ಕಳುಹಿಸುವುದನ್ನು ದುಆದ ಸ್ವೀಕಾರಕ್ಕಾಗಿ ಅಲ್ಲಾಹನು ಕಡ್ಡಾಯಗೊಳಿಸಿದ್ದಾನೆ. ಆದರೆ, ತಮ್ಮ ಓರ್ವ ಅನುಯಾಯಿಗೆ ನನಗಾಗಿ ದುಆ ಮಾಡು ಎಂದು ಹೇಳುತ್ತಿರುವುದು ಹಝ್ರತ್ ಪೈಗಂಬರ್(ಸ)ರ ವಿನಯದ ಪರಾಕಾಷ್ಠೆಯಾಗಿದೆ.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ) ಯಾವುದೇ ಕೆಲಸವನ್ನು ಮಾಡಲು ಎಂದಿಗೂ ಹಿಂಜರಿಯುತ್ತಿರಲಿಲ್ಲ. ಅತಿ ಸಣ್ಣ ಕೆಲಸವನ್ನು ಕೂಡ ಸ್ವತಃ ಮಾಡಿ ಇತರರಿಗೆ ತೋರಿಸುತ್ತಿದ್ದರು ಮತ್ತು ಕಲಿಸುತ್ತಿದ್ದರು.

ಹೀಗೊಂದು ವರದಿಯಿದೆ. ಹಝ್ರತ್ ಪೈಗಂಬರ್(ಸ) ಒಬ್ಬ ಹುಡುಗನ ಬಳಿಯಿಂದ ಹಾದುಹೋದರು. ಅವನು ಮೇಕೆಯ ಚರ್ಮವನ್ನು ಸುಲಿಯುತ್ತಿದ್ದನು. ಆಗ ಹಝ್ರತ್ ಪೈಗಂಬರ್(ಸ) ಅವನನ್ನು ಪಕ್ಕಕ್ಕೆ ಸರಿಸಿ ಹೇಳಿದರು: 'ನಾನು ನಿನಗೆ ಸರಿಯಾದ ವಿಧಾನವನ್ನು ತೋರಿಸುತ್ತೇನೆ, ನೀನು ಹಿಂದೆ ಸರಿ, ಏಕೆಂದರೆ ನಿನಗೆ ಚರ್ಮ ಸುಲಿಯುವಲ್ಲಿ ಪ್ರಾವೀಣ್ಯತೆಯಿಲ್ಲ ಎಂದು ನನಗನಿಸುತ್ತಿದೆ.' ಅದರಂತೆ ಹಝ್ರತ್ ಪೈಗಂಬರ್(ಸ) ಚರ್ಮ ಮತ್ತು ಮಾಂಸದ ನಡುವೆ ತಮ್ಮ ಕೈಯನ್ನು ಕಂಕುಳಿನ ವರೆಗೆ ಹಾಕಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೀಗೆ ಮಾಡು. ಎಲೈ ಹುಡುಗಾ, ಈ ರೀತಿಯಾಗಿ ಚರ್ಮವನ್ನು ಸುಲಿ.' ಹಝ್ರತ್ ಪೈಗಂಬರ್(ಸ) ಅವನ ಸಂಪೂರ್ಣ ಕೆಲಸವನ್ನು ಕೂಡ ಮಾಡಿಕೊಂಡು ಅವನಿಗೆ ಕಲಿಸಿಕೊಟ್ಟರು.

ಹಝ್ರತ್ ಖಬ್ಬಾಬ್(ರ)ರ ಪುತ್ರಿಯಿಂದ ಹೀಗೆ ವರದಿಯಾಗಿದೆ: ಅವರು ರಸೂಲುಲ್ಲಾಹ್(ಸ)ರ ಬಳಿಗೆ ಹಾಲು ಕರೆಯಲು ಮೇಕೆಯನ್ನು ತಂದರು. ಆಗ ಹಝ್ರತ್ ಪೈಗಂಬರ್(ಸ) ಅದನ್ನು ಕಟ್ಟಿ ಹಾಲು ಕರೆದರು. ಹಝ್ರತ್ ಪೈಗಂಬರ್(ಸ) ಹೇಳಿದರು:

'ದೊಡ್ಡ ಪಾತ್ರೆಯನ್ನು ತೆಗೆದುಕೊಂಡು ಬಾ.' ನಾನು ದೊಡ್ಡ ಪಾತ್ರೆಯನ್ನು ತಂದೆ. ಆಗ ಹಝ್ರತ್ ಪೈಗಂಬರ್(ಸ) ಅದು ತುಂಬುವ ವರೆಗೂ ಅದರಲ್ಲಿ ಹಾಲು ಕರೆದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು, 'ನೀನೂ ಕುಡಿ ಮತ್ತು ನಿನ್ನ ನೆರೆಯವರಿಗೂ ಕೊಡು.'

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಯಾರಾದರೂ ಹಝ್ರತ್ ಪೈಗಂಬರ್(ಸ)ರ ಎದುರಿಗೆ ಬಂದರೆ, ಅವರು ಆತನೊಂದಿಗೆ ಹಸ್ತಲಾಘವ ಮಾಡುತ್ತಿದ್ದರು. ಆ ವ್ಯಕ್ತಿಯು ಸ್ವತಃ ತನ್ನ ಕೈಯನ್ನು ಹಿಂದಕ್ಕೆ ತೆಗೆದುಕೊಳ್ಳುವವರೆಗೂ ಹಝ್ರತ್ ಪೈಗಂಬರ್(ಸ) ಆತನ ಕೈಯಿಂದ ತಮ್ಮ ಕೈಯನ್ನು ಹಿಂದಕ್ಕೆ ಎಳೆಯುತ್ತಿರಲಿಲ್ಲ ಮತ್ತು ಆ ವ್ಯಕ್ತಿಯು ಸ್ವತಃ ಮುಖ ತಿರುಗಿಸುವ ವರೆಗೂ ಹಝ್ರತ್ ಪೈಗಂಬರ್(ಸ) ಆತನ ಮುಖದಿಂದ ತಮ್ಮ ಮುಖವನ್ನು ತಿರುಗಿಸುತ್ತಿರಲಿಲ್ಲ. ತಮ್ಮ ಜೊತೆ ಕುಳಿತವರ ಮುಂದೆ ಹಝ್ರತ್ ಪೈಗಂಬರ್(ಸ) ಎಂದಿಗೂ ಕಾಲು ಚಾಚಿ ಕುಳಿತಿರುವುದನ್ನು ಯಾರೂ ಕಂಡಿಲ್ಲ.

ಹಳ್ಳಿಗರಲ್ಲಿ ಝಾಹಿರ್ ಹೆಸರಿನ ಓರ್ವ ಸಹಾಬಿಯು ಹಝ್ರತ್ ಪೈಗಂಬರ್(ಸ)ರಿಗಾಗಿ ಹಳ್ಳಿಯ ಉಡುಗೊರೆಗಳನ್ನು ತರುತ್ತಿದ್ದರು. ಅವರು ಹಿಂದಿರುಗುವಾಗ ಹಝ್ರತ್ ಪೈಗಂಬರ್(ಸ) ಕೂಡ ಅವರಿಗೆ ಸಾಕಷ್ಟು ವಸ್ತುಗಳನ್ನು ನೀಡಿ ಬೀಳ್ಕೊಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: 'ಝಾಹಿರ್ ನಮ್ಮ ಹಳ್ಳಿಯ, ಅಂದರೆ ಹಳ್ಳಿಯಲ್ಲಿ ವಾಸಿಸುವ ಸ್ನೇಹಿತರಾಗಿದ್ದಾರೆ ಮತ್ತು ನಾವು ಅವರ ನಗರದ ಸ್ನೇಹಿತರಾಗಿದ್ದೇವೆ.' ಒಂದು ದಿನ ಝಾಹಿರ್ ಮಾರುಕಟ್ಟೆಯಲ್ಲಿ ತಮ್ಮ ಕೆಲವು ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಅವರ ಹಿಂದಿನಿಂದ ಬಂದು ಅವರನ್ನು ತಬ್ಬಿಕೊಂಡರು. ಹಝ್ರತ್ ಝಾಹಿರ್(ರ)ರಿಗೆ ಪೈಗಂಬರ್(ಸ)ರನ್ನು ನೋಡಲು ಸಾಧ್ಯವಾಗಲಿಲ್ಲ. ಅವರು ಕೇಳಿದರು: 'ಯಾರಿದು? ನನ್ನನ್ನು ಬಿಟ್ಟುಬಿಡಿ.' ಆದರೆ ಅವರು ಹಿಂತಿರುಗಿ ನೋಡಿದಾಗ ಹಝ್ರತ್ ಪೈಗಂಬರ್(ಸ)ರನ್ನು ಗುರುತಿಸಿದರು, ಅವರು ತಮ್ಮ ಬೆನ್ನನ್ನು ಹಝ್ರತ್ ಪೈಗಂಬರ್(ಸ)ರ ಎದೆಗೆ ಸವರಲು ಆರಂಭಿಸಿದರು. 'ಈ ಗುಲಾಮನನ್ನು ಯಾರು ಖರೀದಿಸುತ್ತಾರೆ?' ಎಂದು ಹಝ್ರತ್ ಪೈಗಂಬರ್(ಸ) ಕೇಳಲು ಆರಂಭಿಸಿದರು. ಹಝ್ರತ್ ಝಾಹಿರ್(ರ) ಹೇಳಿದರು: 'ಯಾ ರಸೂಲುಲ್ಲಾಹ್, ಹಾಗಾದರೆ ನೀವು ನನ್ನನ್ನು ನಷ್ಟದ ವ್ಯಾಪಾರವೆಂದು ಕಾಣುವಿರಿ. ನನ್ನನ್ನು ಯಾರು ತಾನೆ ಖರೀದಿಸುವರು?' ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನ ಬಳಿ ನೀನು ನಷ್ಟದ ವ್ಯಾಪಾರವಲ್ಲ, (ಅಥವಾ) ಅಲ್ಲಾಹನ ಸನ್ನಿಧಿಯಲ್ಲಿ ನೀನು ಅತ್ಯಂತ ಮೌಲ್ಯಯುತವಾದ ವ್ಯಕ್ತಿಯಾಗಿರುವೆ.'

ಹಝ್ರತ್ ಇಮಾಮ್ ಹುಸೈನ್(ರ) ಹೇಳುತ್ತಾರೆ, ರಸೂಲುಲ್ಲಾಹ್(ಸ) ಮನೆಗೆ ಪ್ರವೇಶಿಸುವ ಬಗ್ಗೆ ನಾನು ನನ್ನ ತಂದೆಯವರಲ್ಲಿ ಕೇಳಿದೆ. ಹಝ್ರತ್ ಅಲಿ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ತಮ್ಮ ಮನೆಗೆ ಬರುವಾಗ, ಮನೆಯ ಸಮಯವನ್ನು ಮೂರು ಭಾಗಗಳಾಗಿ ವಿಂಗಡಿಸುತ್ತಿದ್ದರು. ಒಂದು ಭಾಗವನ್ನು ಅಲ್ಲಾಹನಿಗಾಗಿ ಮುಡಿಪಾಗಿಡುತ್ತಿದ್ದರು, ಒಂದು ಭಾಗವನ್ನು ತಮ್ಮ ಕುಟುಂಬಕ್ಕಾಗಿ ಮತ್ತು ಒಂದು ಭಾಗವನ್ನು ತಮಗಾಗಿ. ನಂತರ ತಮ್ಮ ಭಾಗದ ಸಮಯವನ್ನು ಕೂಡ ತಮ್ಮ ಮತ್ತು ಜನರ ನಡುವೆ ಹಂಚಿಕೊಳ್ಳುತ್ತಿದ್ದರು. ಅದರಲ್ಲಿ ವಿಶೇಷ ಸಹಾಬಿಯರ ಮೂಲಕ ಸಾಮಾನ್ಯ ಜನರಿಗೆ ಧರ್ಮದ ವಿಷಯಗಳನ್ನು ತಲುಪಿಸುತ್ತಿದ್ದರು ಮತ್ತು ಅವರಿಂದ ಯಾವುದೇ ವಿಷಯವನ್ನು ಮರೆಮಾಚುತ್ತಿರಲಿಲ್ಲ.

ಹಝ್ರತ್ ಪೈಗಂಬರ್(ಸ)ರಿಗೆ ಅವತೀರ್ಣವಾದ ಮೊದಲ ವಹಿಯಿಂದಲೂ ಹಝ್ರತ್ ಪೈಗಂಬರ್(ಸ)ರ ವಿನಯ ಮತ್ತು ವಿನಮ್ರತೆ ವ್ಯಕ್ತವಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮೊದಲ ವಹಿಯು ಹಿರಾ ಗುಹೆಯಲ್ಲಿ ಅವತೀರ್ಣವಾಯಿತು. ಹಝ್ರತ್ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು, 'ಇಖ್‌ರಅ್' ಅಂದರೆ ಓದು ಎಂದು ಹೇಳಿದರು. ನನಗೆ ಓದಲು ಗೊತ್ತಿಲ್ಲ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಇದರ ಅರ್ಥ, ಈ ಹೊರೆಯನ್ನು ನನ್ನ ಮೇಲೆ ಹಾಕಬಾರದು ಎಂದಾಗಿದೆ. ಏಕೆಂದರೆ ಆಗ ಹಝ್ರತ್ ಪೈಗಂಬರ್(ಸ) ಮುಂದೆ ಓದಲು ಯಾವುದೇ ಗ್ರಂಥವನ್ನು ಇಟ್ಟಿರಲಿಲ್ಲ, ಬದಲಾಗಿ ಜಿಬ್ರೀಲ್(ಅ) ಹೇಳಿದ್ದನ್ನೇ ಹಝ್ರತ್ ಪೈಗಂಬರ್(ಸ) ಪುನಃ ಹೇಳಬೇಕಾಗಿತ್ತು. ಇದನ್ನು ಹಝ್ರತ್ ಪೈಗಂಬರ್(ಸ) ಹೇಳಬಹುದಾಗಿತ್ತು. ಆದರೂ ಹಝ್ರತ್ ಪೈಗಂಬರ್(ಸ) ವಿನಮ್ರತೆಯನ್ನು ವ್ಯಕ್ತಪಡಿಸಿದರು. ಆದರೆ ಅಲ್ಲಾಹನು ಈ ಕೆಲಸಕ್ಕಾಗಿ ಹಝ್ರತ್ ಪೈಗಂಬರ್(ಸ)ರನ್ನು ಆರಿಸಿದ್ದರಿಂದ ಓದು ಎಂದು ಮತ್ತೆ ಮತ್ತೆ ಹೇಳಲಾಯಿತು. ಕೊನೆಗೆ ಮೂರನೇ ಬಾರಿ ಹೇಳಿದಾಗ ಹಝ್ರತ್ ಪೈಗಂಬರ್(ಸ) ಓದಿದರು.

ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ: ಒಮ್ಮೆ ನಾನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದೆ. ಹಝ್ರತ್ ಪೈಗಂಬರ್(ಸ) ತಮ್ಮ ಮನೆಯ ಮೇಲಿನ ಮಳಿಗೆಯಲ್ಲಿದ್ದರು. ಆ ವೇಳೆ ಹಝ್ರತ್ ಪೈಗಂಬರ್(ಸ) ಒಂದು ಚಾಪೆಯ ಮೇಲೆ ಮಲಗಿದ್ದರು. ಹಝ್ರತ್ ಪೈಗಂಬರ್(ಸ) ಮತ್ತು ಆ ಚಾಪೆಯ ನಡುವೆ ಬೇರೆ ಯಾವುದೇ ವಸ್ತುವಿರಲಿಲ್ಲ. ಹಝ್ರತ್ ಪೈಗಂಬರ್(ಸ)ರ ತಲೆಯ ಕೆಳಗೆ ಚರ್ಮದ ಒಂದು ತಲೆದಿಂಬು ಇತ್ತು. ಅದರಲ್ಲಿ ಖರ್ಜೂರದ ನಾರು ತುಂಬಲಾಗಿತ್ತು. ಅವರ ಪಾದಗಳ ಬಳಿ ಬಬೂಲ್ ಎಲೆಗಳ ರಾಶಿಯಿತ್ತು. ಹಝ್ರತ್ ಪೈಗಂಬರ್(ಸ)ರ ಮೈಮೇಲೆ ಚಾಪೆಯ ಗುರುತು ಆಗಿರುವುದನ್ನು ಕೂಡ ನಾನು ನೋಡಿದೆ. ಇದನ್ನು ಕಂಡು ನಾನು ಅತ್ತುಬಿಟ್ಟೆ. ಹಝ್ರತ್ ಪೈಗಂಬರ್(ಸ) ಕೇಳಿದರು: 'ನೀನೇಕೆ ಅಳುತ್ತಿದ್ದೀಯಾ?' ನಾನು ಹೇಳಿದೆ: 'ಯಾ ರಸೂಲುಲ್ಲಾಹ್(ಸ), ರೋಮ್ ಮತ್ತು ಇರಾನಿನ ಚಕ್ರವರ್ತಿಗಳು ಐಷಾರಾಮದಿಂದ ಇದ್ದಾರೆ. ನೀವು

ಅಲ್ಲಾಹನ ಪ್ರವಾದಿ ಆಗಿಯೂ ಇಂತಹ ಸ್ಥಿತಿಯಲ್ಲಿದ್ದೀರಿ.' ಹಝ್ರತ್ ಪೈಗಂಬರ್(ಸ) ಹೇಳಿದರು: 'ಅವರಿಗೆ ಇಹಲೋಕವಿರಲಿ ಮತ್ತು ನಮಗೆ ಪರಲೋಕವಿರಲಿ ಎಂಬುವುದರಿಂದ ನಿನಗೆ ಸಂತೋಷವಿಲ್ಲವೇ?'

ದುಸ್ವಭಾವಿಗಳೊಂದಿಗೂ ಹಝ್ರತ್ ಪೈಗಂಬರ್(ಸ) ಯಾವಾಗಲೂ ಮೃದುವಾಗಿ ಮತ್ತು ವಿನಯದಿಂದ ವರ್ತಿಸುತ್ತಿದ್ದರು. ಹಝ್ರತ್ ಅಬೂ ಹುರೈರಾ(ರ)ರಿಂದ ಹೀಗೆ ವರದಿಯಾಗಿದೆ: ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ತನ್ನ ಹಕ್ಕನ್ನು ಕೇಳಿದನು ಮತ್ತು ಕಠಿಣವಾಗಿ ಮಾತನಾಡಿದನು. ಸಹಾಬಿಯರು ಕೋಪಗೊಂಡರು, ಆದರೆ ಹಝ್ರತ್ ಪೈಗಂಬರ್(ಸ) ಹೇಳಿದರು: 'ಅವನನ್ನು ಬಿಟ್ಟುಬಿಡಿ. ಒಂದು ಒಂಟೆಯನ್ನು ಖರೀದಿಸಿ ಆತನಿಗೆ ಕೊಡಿ.' ಸಹಾಬಿಯರು ಹೇಳಿದರು: ಆತನ ಸಾಲಕ್ಕೆ ಸಮನಾದ ಒಂಟೆ ನಮಗೆ ಸಿಗುತ್ತಿಲ್ಲ, ಅದಕ್ಕಿಂತ ಬೆಲೆಬಾಳುವ ಒಂಟೆಗಳು ಮಾತ್ರವಿರುವುದು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಅದನ್ನೇ ಅವನಿಗೆ ಕೊಡಿರಿ. ಏಕೆಂದರೆ ಸಾಲವನ್ನು ಮರುಪಾವತಿಸುವಲ್ಲಿ ಅತ್ಯುತ್ತಮನಾಗಿರುವವನೇ ನಿಮ್ಮಲ್ಲಿ ಅತ್ಯುತ್ತಮನು.'

ಮಕ್ಕಾ ವಿಜಯದ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ತಮ್ಮ ತಂದೆಯ ಜೊತೆಗೆ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಅವರನ್ನು ನೋಡಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ಎಲೈ ಅಬೂಬಕರ್, ನೀವು ಈ ಹಿರಿಯ ವ್ಯಕ್ತಿಯನ್ನು ಮನೆಯಲ್ಲೇ ಇರಲು ಬಿಡಬೇಕಿತ್ತು. ನಾನೇ ಸ್ವತಃ ಅವರ ಬಳಿ ಹೋಗುತ್ತಿದ್ದೆ.' ಆಗ ಹಝ್ರತ್ ಅಬೂಬಕರ್(ರ) ಹೇಳಿದರು: 'ಯಾ ರಸೂಲಲ್ಲಾಹ್! ಅವರು ನಿಮ್ಮ ಸನ್ನಿಧಿಯಲ್ಲಿ ಹಾಜರಾಗುವುದೇ ಹೆಚ್ಚು ಸೂಕ್ತವಾಗಿದೆ.' ಹಝ್ರತ್ ಅಬೂಬಕರ್(ರ) ತನ್ನ ತಂದೆಯನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ಕೂರಿಸಿದರು. ಹಝ್ರತ್ ಪೈಗಂಬರ್(ಸ) ಅವರ ಎದೆಯ ಮೇಲೆ ಕೈಯಾಡಿಸಿದರು ಮತ್ತು ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ ನೀವು ಶಾಂತಿಯನ್ನು ಪಡೆಯುವಿರಿ ಎಂದು ಹೇಳಿದರು. ಹಾಗೆ ಅಬೂ ಖುಹಾಫ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಹಝ್ರತ್ ಪೈಗಂಬರ್(ಸ)ರ ಮನೆಯ ಬಗ್ಗೆ ಹಝ್ರತ್ ಹಸನ್(ರ)ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ)ರ ಮನೆಯ ಬಾಗಿಲುಗಳು ಎಲ್ಲರಿಗೂ ತೆರೆದಿರುತ್ತಿದ್ದವು. ಹಝ್ರತ್ ಪೈಗಂಬರ್(ಸ)ರಿಗಾಗಿ ಯಾವುದೇ ಕಾವಲುಗಾರ ನಿಲ್ಲುತ್ತಿರಲಿಲ್ಲ ಅಥವಾ ಅವರಿಗಾಗಿ ಬೆಳಿಗ್ಗೆ ಮತ್ತು ಸಂಜೆ ದೊಡ್ಡ ಪಾತ್ರೆಗಳಲ್ಲಿ ಊಟವನ್ನು ಬಡಿಸಲಾಗುತ್ತಿರಲಿಲ್ಲ. ಅಂದರೆ ಉನ್ನತ ಗುಣಮಟ್ಟದ ಆಹಾರವನ್ನು ನೀಡಲಾಗುತ್ತಿರಲಿಲ್ಲ. ರಸೂಲುಲ್ಲಾಹ್(ಸ)ರನ್ನು ಭೇಟಿಯಾಗಲು ಇಚ್ಛಿಸುವ ಯಾರಿಗೂ ಸುಲಭವಾಗಿ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಬಹುದಾಗಿತ್ತು. ಹಝ್ರತ್ ಪೈಗಂಬರ್(ಸ) ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದರು. ಸರಳವಾದ ಮತ್ತು ದಪ್ಪದ ಬಟ್ಟೆಗಳನ್ನು ಧರಿಸುತ್ತಿದ್ದರು. ಕತ್ತೆಯ ಮೇಲೆಯೂ ಸವಾರಿ ಮಾಡುತ್ತಿದ್ದರು, ಜನರನ್ನು ತಮ್ಮ ಸವಾರಿಯ ಹಿಂದೆ ಕೂರಿಸಿಕೊಳ್ಳುತ್ತಿದ್ದರು. ಊಟ ಮಾಡಿದ ನಂತರ ತಮ್ಮ ಬೆರಳುಗಳನ್ನು ಚೀಪುತ್ತಿದ್ದರು ಅಂದರೆ ಶುಚಿಗೊಳಿಸುತ್ತಿದ್ದರು.

ಬೆರಳುಗಳನ್ನು ನೆಕ್ಕುವ ಬಗ್ಗೆ ಹಝ್ರತ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್‌ರ ಒಂದು ಟಿಪ್ಪಣಿಯಿದೆ. ಅದರಲ್ಲಿ ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್(ರ) ಹೇಳಿದ್ದಾಗಿ ಹೀಗೆ ಬರೆಯಲಾಗಿದೆ: ಮನುಷ್ಯನ ಕೈಬೆರಳುಗಳಲ್ಲಿ ವಿಶೇಷವಾದ ಸ್ಪರ್ಶ ಶಕ್ತಿಯಿದೆ ಎಂದು ವೈದ್ಯರು ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಹಾಗಾಗಿ ಊಟದ ನಂತರ ಬೆರಳುಗಳನ್ನು ಚೀಪಿದರೆ ಅದು ಜೀರ್ಣಕ್ರಿಯೆಗೆ ಉಪಯುಕ್ತವಾಗಿದೆ.

ಮಸೀದಿಯನ್ನು ಸ್ವಚ್ಛಗೊಳಿಸುವ ಬಗ್ಗೆ ಹಝ್ರತ್ ಯಅ್‌ಖೂಬ್ ಬಿನ್ ಝೈದ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಮಸೀದಿಯಲ್ಲಿ ಬಂದು ಸೇರುವ ಕಸಗಳನ್ನು ಒಂದು ಕೋಲಿನಿಂದ ಸ್ವಚ್ಛಗೊಳಿಸುತ್ತಿದ್ದರು. ಅಂದರೆ ಕೋಲಿನ ತುದಿಗೆ ಬಟ್ಟೆ ಇತ್ಯಾದಿಗಳನ್ನು ಕಟ್ಟಿ ಅದರಿಂದ ಗುಡಿಸುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: 'ಅಲ್ಲಾಹನು ಅತ್ಯಂತ ಕರುಣಾಮಯಿ ಮತ್ತು ಕೃಪಾಳುವಾಗಿದ್ದಾನೆ. ಅವನು ಪ್ರತಿಯೊಂದು ರೀತಿಯಲ್ಲೂ ಮನುಷ್ಯನನ್ನು ಪೋಷಿಸುತ್ತಾನೆ ಮತ್ತು ಅವನ ಮೇಲೆ ಕರುಣೆ ತೋರುತ್ತಾನೆ. ಇದೇ ಕರುಣೆಯ ಕಾರಣದಿಂದ ಲೋಕದ ಜನರನ್ನು ಪಾಪಮಯ ಜೀವನದಿಂದ ಪಾರುಮಾಡಲಿಕ್ಕಾಗಿ ಅಲ್ಲಾಹನು ತನ್ನ ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಕಳುಹಿಸುತ್ತಾನೆ. ಆದರೆ ಅಹಂಕಾರವು ಅತ್ಯಂತ ಅಪಾಯಕಾರಿ ಕಾಯಿಲೆಯಾಗಿದೆ. ಯಾವ ಮನುಷ್ಯನಲ್ಲಿ ಇದು ಬೆಳೆಯುತ್ತದೆಯೋ, ಅವನಿಗೆ ಅದು ಆಧ್ಯಾತ್ಮಿಕ ಸಾವಾಗಿದೆ. ಈ ರೋಗವು ಕೊಲೆಗಿಂತಲೂ ಘೋರವಾದದ್ದು ಎಂದು ನನಗೆ ಖಚಿತವಾಗಿ ತಿಳಿದಿದೆ. ಅಹಂಕಾರಿಯು ಶೈತಾನನ ಸಹೋದರನಾಗುತ್ತಾನೆ. ಏಕೆಂದರೆ ಅಹಂಕಾರವೇ ಶೈತಾನನನ್ನು ನಿಂದ್ಯನಾಗಿಯೂ ಅವಮಾನಿತನಾಗಿಯೂ ಮಾಡಿತು. ಆದ್ದರಿಂದ ಸತ್ಯವಿಶ್ವಾಸಿಯಲ್ಲಿ ಅಹಂಕಾರವಿರಬಾರದು ಎಂಬುದು ಶರತ್ತಾಗಿದೆ. ಬದಲಿಗೆ ಅವನಲ್ಲಿ ವಿನಯ, ವಿನಮ್ರತೆ ಮತ್ತು ಮೃದುತ್ವ ಇರಬೇಕು. ದೇವನ ಸಂದೇಶವಾಹಕರಲ್ಲಿ ಅಪಾರವಾದ ವಿನಮ್ರತೆ ಮತ್ತು ವಿನಯವಿರುತ್ತದೆ. ಈ ಗುಣ ಎಲ್ಲಕ್ಕಿಂತ ಹೆಚ್ಚಾಗಿ ಹಝ್ರತ್ ಪೈಗಂಬರ್(ಸ)ರಲ್ಲಿ ಇತ್ತು. ಹಝ್ರತ್ ಪೈಗಂಬರ್(ಸ)ರ ಓರ್ವ ಸೇವಕನೊಡನೆ, ನಿನ್ನೊಂದಿಗೆ ಪೈಗಂಬರ್(ಸ)ರ ವರ್ತನೆ ಹೇಗಿತ್ತು ಎಂದು ಕೇಳಲಾಯಿತು. ಆತ ಹೇಳಿದನು: 'ಸತ್ಯವೇನೆಂದರೆ, ನನಗಿಂತ ಹೆಚ್ಚಾಗಿ ಅವರು ನನ್ನ ಸೇವೆ ಮಾಡುತ್ತಾರೆ.' **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವಸಲ್ಲಿಮ್.**

ಅಲ್ಲಾಹನು ನಮಗೆ ಹಝ್ರತ್ ಪೈಗಂಬರ್[ಸ]ರ ಬೋಧನೆಗಳು ಮತ್ತು ಅವರ ಸುನ್ನತನ್ನು ಅನುಸರಿಸುತ್ತಾ, ವಿನಯವನ್ನು ಅಳವಡಿಸಿಕೊಳ್ಳುವ ಸೌಭಾಗ್ಯವನ್ನು ದಯಪಾಲಿಸಲಿ.

ಖುತ್ಬದ ಕೊನೆಯಲ್ಲಿ ಹುಝೂರ್ ದಿವಂಗತ ಮುಹಮ್ಮದ್ ಇಸ್‌ಹಾಖ್ ಸಾಹಿಬ್‌ರ ಪುತ್ರ ಸನ್ಮಾನ್ಯ ಮಲಿಕ್ ದಾವುದ್ ಮಹ್ಮೂದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝಃ ಗ್ಹಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۚ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis[atba]***

At, ***'Masjid Mubarak',*** *Islamabad, Tilford,* U.K. On 22-05-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon